**ಮಂಗಳೂರು ವಿಶ್ವವಿದ್ಯಾನಿಲಯ**

**ಕನಕದಾಸ ಅಧ್ಯಯನ ಪೀಠ**

**ಕನಕದಾಸ ಸಂಶೋಧನ ಕೇಂದ್ರ**

ಮಂಗಳಗಂಗೋತ್ರಿ – 574199

# 'ಕನಕ ಕೀರ್ತನ ಗಂಗೋತ್ರಿ'

**ಶೈಕ್ಷಣಿಕ ಸಂಸ್ಥೆಗಳ ಹಾಗೂ ಸಾರ್ವಜನಿಕರ ಸಾಮುದಾಯಿಕ ಪಾಲ್ಗೊಳ್ಳುವಿಕೆಯ ಕನಕದಾಸರ ಕೀರ್ತನೆಗಳ ಗಾಯನ ಮತ್ತು ಸಮೂಹ ನೃತ್ಯ ಭಜನಾ ಕಾರ್ಯಕ್ರಮ**

**ಅಧ್ಯಕ್ಷತೆ**

**ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**

ಸನ್ಮಾನ್ಯ ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ

**ಉದ್ಘಾಟನೆ**

**ಹರಿದಾಸ ಸಂಗೀತ ರತ್ನ ಶ್ರೀ ಪುತ್ತೂರು ನರಸಿಂಹ ನಾಯಕ್**

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಬೆಂಗಳೂರು

**ಗೌರವ ಉಪಸ್ಥಿತಿ**

**ಡಾ. ಪರಮೇಶ್ವರ**

ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಂಗಳೂರು ವಿಶ್ವವಿದ್ಯಾನಿಲಯ

**ಡಾ. ಸೋಮಣ್ಣ ಹೊಂಗಳ್ಳಿ**

ಅಧ್ಯಕ್ಷರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ

**14 ಫೆಬ್ರವರಿ 2023ರಂದು ಮಂಗಳವಾರ ಪೂರ್ವಾಹ್ನ 10.00 ಗಂಟೆಗೆ**
**ಮಂಗಳ ಸಭಾಂಗಣ, ಮಂಗಳೂರು ವಿಶ್ವವಿದ್ಯಾನಿಲಯ**

**ತಮಗೆಲ್ಲರಿಗೂ ಆದರದ ಸ್ವಾಗತ**

| | |
|---|---|
| **ಡಾ. ಧನಂಜಯ ಕುಂಬ್ಳೆ** | **ಪ್ರೊ. ಕಿಶೋರ್ ಕುಮಾರ್ ಸಿ.ಕೆ.** |
| ಸಂಯೋಜಕರು | ಕುಲಸಚಿವರು |
| ಕನಕದಾಸ ಸಂಶೋಧನ ಕೇಂದ್ರ | ಮಂಗಳೂರು ವಿಶ್ವವಿದ್ಯಾನಿಲಯ |

**(ಮಂಗಳೂರು ತಾಲೂಕು ವ್ಯಾಪ್ತಿಯ ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳು, ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸಂಯೋಜಿತ ಹಾಗು ಸ್ವಾಯತ್ತ ಕಾಲೇಜುಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಹಾಗು ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲಾ ವ್ಯಾಪ್ತಿಯ ರಾಜೀವ್ ಗಾಂಧಿ ವೈದ್ಯಕೀಯ ಶಿಕ್ಷಣ, ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ, ವಿಶ್ವವಿದ್ಯಾನಿಲಯ ಕಾಲೇಜುಗಳ ವಿದ್ಯಾರ್ಥಿಗಳು, ಅಧ್ಯಾಪಕ–ಅಧ್ಯಾಪಕೇತರರು ಅಲ್ಲದೆ ಸಾರ್ವಜನಿಕರ ಸಾಮುದಾಯಿಕ ಪಾಲ್ಗೊಳ್ಳುವಿಕೆಯ ಕಾರ್ಯಕ್ರಮ.)**

## ಕನಕದಾಸ ಅಧ್ಯಯನ ಪೀಠ ಮತ್ತು ಕನಕದಾಸ ಸಂಶೋಧನ ಕೇಂದ್ರ

ಕವಿಯಾಗಿ, ದಾರ್ಶನಿಕರಾಗಿ ಮತ್ತು ಸಾಮಾಜಿಕ ಚಿಂತಕರಾಗಿ ಸಮಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಕನಕದಾಸರದು ಮಹತ್ವಪೂರ್ಣ ಹೆಸರು. ಅವರ ಬದುಕು ಮತ್ತು ಬರೆಹಗಳ ಅಧ್ಯಯನ ಮತ್ತು ಪ್ರಸರಣದ ಉದ್ದೇಶದಿಂದ ಕರ್ನಾಟಕ ಸರಕಾರ 2003ರಲ್ಲಿ ಕನಕದಾಸ ಅಧ್ಯಯನ ಪೀಠ ಹಾಗೂ 2008ರಲ್ಲಿ ಕನಕದಾಸ ಸಂಶೋಧನ ಕೇಂದ್ರವನ್ನು ಸ್ಥಾಪಿಸಿದೆ. ಕಳೆದ ಇಪ್ಪತ್ತು ವರ್ಷಗಳಿಂದೀಚೆಗೆ ಕನಕದಾಸ ಅಧ್ಯಯನ ಪೀಠ ಮತ್ತು ಕನಕದಾಸ ಸಂಶೋಧನ ಕೇಂದ್ರ ಕನಕದಾಸರು ಪ್ರತಿನಿಧಿಸುತ್ತಿದ್ದ ಸಾಮಾಜಿಕ ಚಿಂತನೆ ಮತ್ತು ಕಾಳಜಿಗಳನ್ನು ಪಸರಿಸುವ ಮತ್ತು ಜನಪ್ರಿಯಗೊಳಿಸುವ ವೈವಿಧ್ಯಮಯವಾಗಿರುವ ಹಲವಾರು ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಕನಕದಾಸರ ತತ್ತ್ವಚಿಂತನೆಗಳನ್ನು ಯುವ ಸಮುದಾಯಕ್ಕೆ ತಲುಪಿಸುವ ಆಶಯದಲ್ಲಿ 'ಕನಕ ತತ್ತ್ವ ಚಿಂತನ' ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿದೆ. ಈವರೆಗೆ ಒಟ್ಟು 237 ಪ್ರಚಾರೋಪನ್ಯಾಸಗಳನ್ನು ರಾಜ್ಯ ಮತ್ತು ದೇಶದ ವಿವಿಧೆಡೆ ನೆರವೇರಿಸಿದೆ. ಇದರೊಂದಿಗೆ 2 ಅಂತಾರಾಷ್ಟ್ರೀಯ, 4 ರಾಷ್ಟ್ರೀಯ ವಿಚಾರ ಸಂಕಿರಣ, ಕನಕ ಸಾಹಿತ್ಯ ಸಮ್ಮೇಳನ, ಕನಕ ಜಯಂತಿ ಪ್ರಯುಕ್ತ ವಿಶೇಷ ಉಪನ್ಯಾಸ, 'ಕನಕ ಸ್ಮೃತಿ' – ಕನಕ ಪುರಸ್ಕಾರ, ಕನಕ ಕೀರ್ತನ ವ್ಯಾಖ್ಯಾನ – ಅರ್ಥಾನುಸಂಧಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರ ಏರ್ಪಡಿಸುತ್ತಾ ಬರುತ್ತಿದೆ. ಸಂಶೋಧನ ಕೇಂದ್ರವು ಒಟ್ಟು 7 ಕೃತಿಗಳನ್ನು, ಒಂದು ಧ್ವನಿಸುರುಳಿಯನ್ನು ಪ್ರಕಟಿಸಿದ್ದು, ಇವುಗಳ ಮಾರಾಟದ ವ್ಯವಸ್ಥೆಯನ್ನು ಕೂಡಾ ಕೇಂದ್ರವು ಮಾಡುತ್ತಿದೆ.

## ಕನಕ ಕೀರ್ತನ ಗಂಗೋತ್ರಿ

ಕನಕದಾಸರ ಕೀರ್ತನೆಗಳನ್ನು ವಿದ್ಯಾರ್ಥಿ ಸಮುದಾಯಕ್ಕೆ ಪ್ರಚಾರಪಡಿಸುವ ನಿಟ್ಟಿನಲ್ಲಿ, ಸಾಮುದಾಯಿಕ ಪಾಲ್ಗೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸುವ 'ಕನಕ ಕೀರ್ತನ ಗಂಗೋತ್ರಿ' ಎಂಬ ಕನಕದಾಸರ ಕೀರ್ತನೆಗಳ ಗಾಯನ ಕಾರ್ಯಕ್ರಮವನ್ನು ಪ್ರೌಢಶಾಲೆ, ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಅಧ್ಯಾಪಕ–ಅಧ್ಯಾಪಕೇತರ, ಸಾರ್ವಜನಿಕ ಮಟ್ಟದಲ್ಲಿ ವಿಶ್ವವಿದ್ಯಾನಿಲಯ ಹಾಗೂ ಅವುಗಳ ಸಂಯೋಜಿತ ಕಾಲೇಜು ಮತ್ತು ಇತರ ಸಾರ್ವಜನಿಕ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸಿಕೊಂಡು ಬರುತ್ತಿದೆ. ಈ ಶೈಕ್ಷಣಿಕ ವರ್ಷದಿಂದ ಸಾರ್ವಜನಿಕ ಮಟ್ಟದ 'ಕನಕ ಸಮೂಹ ನೃತ್ಯ ಭಜನೆ' ಕಾರ್ಯಕ್ರಮವನ್ನು ಆಯೋಜಿಸಿದೆ. ಕೀರ್ತನ ಗಾಯನ ಕಾರ್ಯಕ್ರಮದಲ್ಲಿ ಪ್ರತೀ ವಿಭಾಗದಿಂದ ಆಯ್ಕೆಯಾದ ಮೂರು ಮಂದಿ ಅಭ್ಯರ್ಥಿಗಳಿಗೆ ಹಾಗು ಸಮೂಹ ನೃತ್ಯ ಭಜನೆಯಲ್ಲಿ ಆಯ್ಕೆಯಾದ ಮೂರು ತಂಡಗಳಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿಯಲ್ಲಿ ನಡೆಯುವ 'ಕನಕ ಸ್ಮೃತಿ' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ನಗದು, ಕನಕ ಪುರಸ್ಕಾರ, ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಗುತ್ತದೆ.

**ಈ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಸಂಪರ್ಕಿಸಬಹುದಾದ**
**ದೂರವಾಣಿ ಸಂಖ್ಯೆಗಳು : 9591480138**
**ಇಮೇಲ್– kanakadasaresearchcenter2008@gmail.com**